# ಕಲ್ಲು ಮತ್ತು ಮೂರ್ತಿ

ಅನತಿ ಪೂರ್ವದಲ್ಲಿ, ನಮಗೆ ತಿಳಿದಂತೆ ನವೋದಯ ಕಾಲದಲ್ಲಿ, ಸಾಹಿತಿಗಳು ಹಲವು ಪಾತ್ರಗಳನ್ನು ವಹಿಸಬೇಕಾಗುತ್ತಿತ್ತು: ಅವರು ಕೇವಲ ಬರಹಗಾರರಾಗಿರಲಿಲ್ಲ, ಮಾರ್ಗದರ್ಶಿಗಳು, ಸಲಹೆಗಾರರು, ಮಾದರಿಗಳು, ತೀರ್ಪುಗಾರರು, ಮಧ್ಯಸ್ಥರು ಆಗಿದ್ದರು. ಸಾಹಿತಿಗಳೂ ಜನರ ಈ ನಿರೀಕ್ಷೆಗೆ ಅನುಸಾರ ನಡೆದುಕೊಳ್ಳುತ್ತಿದ್ದರು. ಒಮ್ಮೆ ಒಬ್ಬ ಪ್ರಸಿದ್ಧ ಕತೆಗಾರರು ತಮ್ಮ ಮನೆ ಕಾಂಪೌಂಡಿನ ಗೇಟಿನ ಬಳಿ ಹಳೆ ಪರಿಚಿತ ಹಳ್ಳಿಗನೊಬ್ಬನನ್ನು ಕಂಡು ಅವನನ್ನು ಮಾತನಾಡಿಸಿದರು: "ಹೇಗಿದ್ದೀಯೋ ಯಜಮಾನಾ, ಊರಿನಲ್ಲಿ ಎಲ್ಲಾ ಕ್ಷೇಮವೋ, ಹೆಂಡತಿ ಮಕ್ಕಳು? ವ್ಯವಸಾಯ ಹೇಗೆ ನಡೆಯುತ್ತಿದೆ?" ಯಜಮಾನನಿಗೆ ಆಗಲೇ ಸಾಕಷ್ಟು ವಯಸ್ಸಾಗಿತ್ತು. "ಪರವಾಯಿಲ್ಲ ಸ್ವಾಮಿ, ಈಗ ಮಕ್ಕಳು ದುಡಿಯುತ್ತಿದ್ದಾರೆ, ನಾನು ಮನೆಯಷ್ಟಕ್ಕೆ ಇದ್ದೇನೆ," ಎಂದ. "ಒಳ್ಳೇದಾಯಿತು. ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆಯೋ?" ಎಂದರು ಕತೆಗಾರರು. "ನೋಡಿಕೊಳ್ಳುತ್ತಿದ್ದಾರೆ, ಸ್ವಾಮಿ, ತಮ್ಮ ದಯ. ಆದರೂ... " ಎಂದ ಯಜಮಾನ, ಹೇಳಲೋ ಬೇಡವೋ ಎಂದು ಅನುಮಾನಿಸುತ್ತಿದ್ದವನಂತೆ. "ಏನು ಆದರೂ?... ಹೇಳಬಹುದಲ್ಲ ನನ್ನ ಹತ್ತಿರ," ಎಂದರು ಕತೆಗಾರರು. ಯಜಮಾನ ಅಳುಕುತ್ತ ಅಳುಕುತ್ತ ಹೇಳಿದ: "ಸ್ವಲ್ಪ ಹೆಚ್ಚು ಪ್ರೀತಿ ತೋರಿಸುತ್ತ ಇದ್ದರೆ ಚೆನ್ನಾಗಿರುತ್ತಿತ್ತು ಅಂತ ಅನಿಸುತ್ತದೆ ಮಹಾಸ್ವಾಮಿ. ಆದರೆ ಏನು ಮಾಡಲಿ, ಅದು ಅವರಿಗೇ ತೋರಬೇಕಲ್ಲ!"

ಅದಕ್ಕೆ ಕತೆಗಾರರು: "ನೋಡಯ್ಯ ಯಜಮಾನ, ನೀನು ಗುಡ್ಡದ ಮೇಲಿನ ಕಲ್ಲನ್ನು ನೋಡಿದ್ದಿಯಲ್ಲ, ಗುಡ್ಡದ ಮೇಲಿನ ಕಲ್ಲನ್ನೂ ನೋಡಿದ್ದಿ, ಗುಡಿಯ ಒಳಗಿನ ಮೂರ್ತಿಯನ್ನೂ ನೋಡಿದ್ದೀ, ಅಲ್ಲವಾ?"

"ಹೌದು ss ಸ್ವಾಮಿ."

"ಎರಡೂ ಕಲ್ಲು, ಹೌದೋ ಅಲ್ಲವೋ?"

"ಹೌದು ಸ್ವಾಮಿ. ನೀವು ಹೇಳುವುದು ನಿಜ."

"ಆದರೂ ವ್ಯತ್ಯಾಸವಿದೆ, ಏನು ವ್ಯತ್ಯಾಸ ಹೇಳು ನೋಡೋಣ!"

ಹೇಗೆ ಹೇಳುವುದೆಂದು ತಿಳಿಯದೆ ಯಜಮಾನ ಸುಮ್ಮನಾದ.

"ಕಲ್ಲಿಗೆ ಏಟು ಬಿದ್ದೂ ಬಿದ್ದೂ ಅದು ಮೂರ್ತಿಯಾಗುತ್ತದೆ, ಹೌದೋ ಅಲ್ಲವೋ?"

"ಹೌದು ಸ್ವಾಮಿ, ನೀವು ಹೇಳಿದ್ದು ನಿಜ."

"ನೀನಿನ್ನೂ ಕಲ್ಲು, ನಿನಗೆ ಏಟು ಬೀಳುತ್ತಿದೆ. ತಾಳಿಕೋಬೇಕಪ್ಪಾ. ಆಮೇಲೆ ನೀನು ಮೂರ್ತಿಯಾಗುತ್ತೀ."

ಯಜಮಾನ ಒಂದು ಕ್ಷಣ ಸುಮ್ಮನಾದ. ನಂತರ ಕತೆಗಾರರ ಕಾಲಿಗೆ ಬಿದ್ದ.

"ಅರ್ಥವಾಯಿತು, ದೇವ್ರೆ. ಇದು ಚಿನ್ನದಂಥ ಮಾತು, ಇಂಥಾ ಮಾತು ನಾನು ಇದುವರೆಗೆ